# ಆಹಾ ಸುದ್ದಿ!

★ ಸಸಿತೋಟ

'ಫಾದರ್ಸ್ ಡೇ'ಗೆ ಸಾಕ್ಸ್, ಟೈ ಮೊದಲಾದವುಗಳನ್ನು ಉಡುಗೊರೆ ನೀಡುವುದು ವಾಡಿಕೆ. ಆದರೆ ಬ್ರಿಟನ್ನಿನಲ್ಲಿ ಒಂದು ಸಾವಿರಕ್ಕೂ ಅಧಿಕ ಪುರುಷರ ಸಮೀಕ್ಷೆ ನಡೆಸಿದಾಗ ಅಡುಗೆ ಪುಸ್ತಕ, ಅಡುಗೆ ಸಲಕರಣೆಗಳನ್ನು ಉಡುಗೊರೆಯಾಗಿ ಬಯಸುವುದಾಗಿ ಹೇಳಿದರಂತೆ. 'ಮದರ್ಸ್ ಡೇ'ಗೆ ಮಹಿಳೆಯರು ಏನು ಉಡುಗೊರೆ ಕೇಳುವರೋ!




'ಜಸ್ಟ್ ಮ್ಯಾರೀಡ್' ಎಂದು ಕಾರಿನ ಮೇಲೆ ಹಾಕಿಕೊಂಡು ಸಂಭ್ರಮಿಸುವುದೇನೋ ಸರಿ. ಆದರೆ ಜಾರ್ಜಿಯಾದ ಲಿಯೋನಾ ಎಂಬಾಕೆ ಗಂಡನಿಂದ ವಿಚ್ಛೇದನ ಸಿಕ್ಕಿದ್ದನ್ನು ಟ್ರಕ್ ಮೇಲೆ 'ಜಸ್ಟ್ ಡಿವೋರ್ಸ್ಡ್' ಎಂದು ಬರೆದುಕೊಂಡು ಊರಿಡೀ ತಿರುಗಿದಳಂತೆ. ಮರುಮದುವೆಗೆ ಇದೇ ಆಹ್ವಾನ ಎಂದೂ ಭಾವಿಸಬಹುದೆ?

ಆಸ್ಟ್ರಿಯಾದಲ್ಲಿ ತೆರಿಗೆಯನ್ನು ವಿರೋಧಿಸಲು ವೇಶ್ಯಾವಾಟಿಕೆಗಳ ಮಾಲೀಕರು ಹೊಸ ಹಾದಿ ಹಿಡಿದಿದ್ದಾರಂತೆ. 'ಉಚಿತ ಲೈಂಗಿಕ ಸೇವೆ' ಎಂದು ಜಾಹೀರಾತು ಹಾಕಿದ್ದು, ಪುರುಷರು ವೇಶ್ಯಾವಾಟಿಕೆಗಳ ಮುಂದೆ ಸಾಲುಗಟ್ಟಿ ನಿಂತಿರುವ ಚಿತ್ರವನ್ನು ಅಲ್ಲಿಯ ಪೇಪರ್ ಪ್ರಕಟಿಸಿದೆಯಂತೆ. ಉಚಿತವಾಗಿದ್ದರಿಂದ ತೆರಿಗೆ ಹಾಕುವ ಪ್ರಶ್ನೆಯೇ ಇಲ್ಲ. ಆದರೆ ನಷ್ಟವನ್ನು ಟಿಪ್ಸ್ ಮೂಲಕ ಭರಿಸಿಕೊಳ್ಳಬಹುದು.



ಲ್ಯಾಂಕಶೈರ್‌ನ ಹೆಲ್ಸಿಂಗ್ಡನ್ ಪ್ರಾಥಮಿಕ ಶಾಲೆಯಲ್ಲಿ ಹನ್ನೊಂದು ಜೊತೆ ಅವಳಿಗಳಿದ್ದಾರಂತೆ. ಇದು ಸಾಲದು ಎನ್ನುವಂತೆ ಶಾಲೆಯ ಮುಖ್ಯೋಪಾಧ್ಯಾಯರಿಗೆ, ಹಣಕಾಸು ಅಧಿಕಾರಿಗೆ ಅವಳಿ ಸಹೋದರರಿದ್ದಾರೆ. ಶಾಲೆಯ ಇತಿಹಾಸ ಕೆದಕುತ್ತ ಹೋದರೆ ಹಲವು ಅವಳಿ ವಿದ್ಯಾರ್ಥಿಗಳು ಓದಿದ್ದು ತಿಳಿದು ಬಂತಂತೆ. ಅಲ್ಲಿಯ ನೀರಿನಲ್ಲೇ ಅವಳಿ ಮಕ್ಕಳ ರಹಸ್ಯ ಅಡಗಿರಬಹುದು ಎಂಬ ಸುದ್ದಿ ಹರಡಿದೆಯಂತೆ. ಅಲ್ಲಿಯ ನೀರಿಗೂ ಬೆಲೆ ಬರಬಹುದು.



ಕೆಫೆ, ವಿಮಾನ ನಿಲ್ದಾಣ, ಪಾರ್ಕ್, ಶೌಚಾಲಯಗಳಲ್ಲಿ ಟೈಪ್‌ರೈಟರ್ ಬಳಸುವ ಚಿತ್ರಗಳು ಅಂತರ್ಜಾಲದಲ್ಲಿ ಹರಿದಾಡುತ್ತಿದ್ದು, ಲ್ಯಾಪ್‌ಟಾಪ್, ಟ್ಯಾಬ್ಲೆಟ್ ಬದಲು ಹಳೆಯ ಟೈಪ್‌ರೈಟರ್ ಬಳಕೆ 'ಫ್ಯಾಷನ್' ಆಗಿ ಬದಲಾಗುತ್ತಿದೆ. ಮೊದಲ ಮೂರು ಸ್ಥಳಗಳೇನೋ ಸರಿ, ಆದರೆ ಸಾರ್ವಜನಿಕ ಶೌಚಾಲಯದಲ್ಲಿ ಟೈಪ್‌ರೈಟರ್ ಬಳಕೆ ಕುಚೋದ್ಯದ ಪರಮಾವಧಿಯೋ ಅಥವಾ ಅಲ್ಲಿ ಕುಳಿತುಕೊಳ್ಳುವ ಅವಧಿ ಅಷ್ಟೊಂದು ವಿಸ್ತರಿಸುತ್ತಿದೆಯೋ!

ಟ್ರಿನಿಡಾಡ್‌ನ ಶೆಮಿಕಾ ಚಾರ್ಲ್ಸ್ ವಿಶ್ವದ ನಂಬರ್ ಒನ್ 'ಬಳುಕುವ ರಾಣಿ'ಯಂತೆ. ನಿಲ್ಲಿಸಿದ ಕಾರಿನ ಕೆಳಭಾಗದಲ್ಲಿ ಇಡೀ ಶರೀರವನ್ನು ತೂರಿಕೊಳ್ಳುತ್ತಾಳೆ ಈಕೆ. ಕೇವಲ 8.5 ಇಂಚು, ಅಂದರೆ ಒಂದು ಬಿಯರ್ ಬಾಟಲ್‌ನಷ್ಟು ಎತ್ತರವಿರುವ ಜಾಗದಲ್ಲೂ ಶರೀರವನ್ನು ತೂರಿಸಿ ದಾಖಲೆ ಮಾಡಿದ್ದಾಳಂತೆ. ರ‍್ಯಾಂಪ್ ಮೇಲೆ ಬಳುಕುವವರು, ಸೈಜ್ ಝೀರೋದವರು ಕೇಳಿಸಿಕೊಂಡರೆ ಮತ್ತೊಂದಿಷ್ಟು ದಾಖಲೆ ಬರಬಹುದು.

